ಯಾವುದೇ ಸ್ವಾರ್ಥವಿಲ್ಲ. ಆಡಳಿತದ ದೃಷ್ಟಿಯಿಂದ ಈ ಬಿಲ್‌ನ್ನು ಪಾಸ್ ಮಾಡಿಕೊಡಬೇಕೆಂದು ಸರ್ಕಾರದವರು ಕೇಳಿದ್ದಾರೆ. ತಮಗೂ ಕೂಡ ಇದರ ಬಗ್ಗೆ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಇದಲ್ಲದೆ ನೀವು ಇದಕ್ಕೆ ಸಂಬಂಧಪಟ್ಟಂತೆ ನಾಳಿದ್ದು ಸಂಬಂಧಪಟ್ಟ ಮಂತ್ರಿಗಳ ಜೊತೆ ಚರ್ಚೆಯನ್ನೂ ಮಾಡಬಹುದು. ಏಕೆಂದರೆ ನೀವು ಸದನ ಕಲಾಪ ಸಮಿತಿಯಲ್ಲಿ ಸದಸ್ಯರಲ್ಲದ್ದರಿಂದ ನೀವು ನಾಳಿದ್ದು ಮಂತ್ರಿಗಳ ಜೊತೆ ಚರ್ಚೆ ಮಾಡಬಹುದು. ಆದಕಾರಣ ಸಧ್ಯಕ್ಕೆ ಈ ವಿಷಯವನ್ನು ಇಲ್ಲಿಗೇ ನಿಲ್ಲಿಸಿ ಇದನ್ನು ಮತ್ತೆ ಶನಿವಾರ ತೆಗೆದುಕೊಳ್ಳುತ್ತೇನೆ. ಈಗ ಒಂದು ಪ್ರಕಟಣೆ ಇದೆ.

12 ಪ್ರಕಟಣೆ

ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ವರದಕ್ಷಿಣೆ ಸಾವಿನ ಬಗ್ಗೆ ಸದನದಲ್ಲಿ ಪ್ರಸ್ತಾಪವಾಗಿ, ಅಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಸಂಬಂಧಪಟ್ಟ ಕಾನೂನುಗಳಿಗೆ ಸೂಕ್ತ ತಿದ್ದುಪಡಿ ಹಾಗೂ ಅವುಗಳ ಯಶಸ್ವಿ ಅನುಷ್ಠಾನಕ್ಕೆ ಸಲಹೆ ಸೂಚನೆಗಳನ್ನು ನೀಡಲು ಹಾಗೂ ಈ ಮುಂದಿನ ಪರಿಶೀಲನಾಂಶಗಳನ್ನು ಪರಿಶೀಲಿಸಲು ಎಂದರೆ :

(ಎ) ಈಗ ಇರುವ ಪೊಲೀಸ್ ತನಿಖೆ, ವಿಚಾರಣೆ, ಮರಣ ಸಂದರ್ಭದಲ್ಲಿಯ ಹೇಳಿಕೆಗಳು, ನ್ಯಾಯಸಂಬಂಧಿತ ವಿಜ್ಞಾನ ಮತ್ತು ಔಷಧ ಹಾಗೂ ಅಭಿಯೋಗ ವ್ಯವಹರಣೆಗಳ ಸಂಬಂಧದಲ್ಲಿ ಅಧ್ಯಯನ ನಡೆಸಲು:

(ಬಿ) ಶಿಕ್ಷೆಯ ಪ್ರಮಾಣ ಕಡಿಮೆಯಾಗುತ್ತಿರುವುದಕ್ಕೆ ಕಾರಣವಾದ ಮೇಲ್ಕಂಡ ವ್ಯವಹರಣೆಗಳಲ್ಲಿಯ ಕುಂದುಕೊರತೆಗಳು ಹಾಗೂ ಲೋಪ-ದೋಷಗಳನ್ನು ಕಂಡುಹಿಡಿಯುವುದು ಮತ್ತು ಅಂಥ ಅಪರಾಧಗಳಲ್ಲಿ ಶಿಕ್ಷೆಯ ಪ್ರಮಾಣ ಹೆಚ್ಚಾಗುವಂತೆ ನೋಡಿಕೊಳ್ಳಲು ಸಾಧನೋಪಾಯಗಳನ್ನು ಸೂಚಿಸಲು:

(ಸಿ) ಸುಟ್ಟ ಮತ್ತು ವಿಷ ಸೇವನೆಯಂಥ ವಿಶೇಷ ಪ್ರಕರಣಗಳಲ್ಲಿ ಈಗ ಇರುವ ಮೂಲ ಸೌಲಭ್ಯಗಳನ್ನು ಮತ್ತು ಅಂಥ ವ್ಯವಸ್ಥೆ ನಿರ್ವಹಣೆಯ ಬಗ್ಗೆ ಅಧ್ಯಯನ ನಡೆಸುವುದು ಮತ್ತು ಕೌಟುಂಬಿಕ ಹಿಂಸೆಯ ಬಲಿಪಶುಗಳಾದ ಮಹಿಳೆಯರ ಶುಶ್ರೂಷೆಗಾಗಿ ಇರುವ ವೈದ್ಯಕೀಯ ಚಿಕಿತ್ಸೆ ಹಾಗೂ ಮೂಲ ಸೌಲಭ್ಯಗಳ ಸುಧಾರಣೆ ಸಲಹೆ ನೀಡಲು :

(ಡಿ) ಕೌಟುಂಬಿಕ ಹಿಂಸೆಯ ಬಲಿಪಶುಗಳಾದ ಮಹಿಳೆಯರಿಗೆ ಸಾಕಷ್ಟು ರಕ್ಷಣೆ ಒದಗಿಸುವುದಕ್ಕಾಗಿ ಅಗತ್ಯ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಲು:

ಈ ಕೆಳಕಂಡ ವಿಧಾನ ಸಭೆಯ 15 ಮಾನ್ಯ ಸದಸ್ಯರು ಹಾಗೂ ವಿಧಾನ ಪರಿಷತ್ತಿನ 5 ಮಾನ್ಯ ಸದಸ್ಯರುಗಳಿರುವ ಜಂಟಿ ಸದನ ಸಮಿತಿಗೆ ಒಪ್ಪಿಸಲಾಗಿದೆ.

ಈ ಸಮಿತಿಯು ತನ್ನ ವರದಿಯನ್ನು ಎಂಟು ವಾರದೊಳಗಾಗಿ ನೀಡತಕ್ಕದ್ದು.

ಶ್ರೀಯುತರುಗಳಾದ :

1. ಕೆ.ಎಸ್.ಪುಟ್ಟಣಯ್ಯ
2. ಜೆ.ಪಿ. ಶ್ರೀರಾಮರೆಡ್ಡಿ

3. ಜೆ. ಸಿ. ಮಾಧುಸ್ವಾಮಿ
4. ಶ್ರೀಮತಿ ಪ್ರಮೀಳಾ ನೇಸರ್ಗಿ
5. ಡಿ. ವಿ. ಸದಾನಂದಗೌಡ
6. ಎಸ್. ಪಿ. ಮುದ್ದಹನುಮೇಗೌಡ
7. ವೀರಪ್ಪ ಮೊಯಿಲಿ
8. ಶ್ರೀಮತಿ ಭಾಗೀರತಮ್ಮ ಮರುಳು ಸಿದ್ದನಗೌಡ
9. ಶ್ರೀಮತಿ ಜ್ಯೋತಿರೆಡ್ಡಿ
10. ಶ್ರೀಮತಿ ಡಿ. ಜಿ. ಹೇಮಾವತಿ
11. ಶಿವಾನಂದ ಪಾಟೀಲ್
12. ಶ್ರೀಮತಿ ಬಿ.ಟಿ. ಲಲಿತಾ ನಾಯಕ್
13. ಚಂದ್ರಶೇಖರ್ ನಾಯಕ್
14. ಎನ್. ಎಂ. ನಬಿ
15. ಶ್ರೀಮತಿ ಕೆ.ಆರ್. ಪ್ರಭಾವತಿ ಜಯರಾಮ್

ಶ್ರೀಮತಿ ಪ್ರಮೀಳಾ ನೇಸರ್ಗಿ ಅವರನ್ನು ಈ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತೇನೆ.

ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಈಗ ನಾಳೆದ್ದು, ಶನಿವಾರ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು ರಾತ್ರಿ 9-15 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ ಏಪ್ರಿಲ್ ಮಾಹೆ 1999ರ ಶನಿವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)